ಸರಿಯಾಗಿ ಆಗದೇ ಬಿರುಕು ಬಿಟ್ಟಿದೆ. ರಿಸರ್ವಾಯರನ್ನು ಸರಿಯಾಗಿ ಮಾಡಲಿಕ್ಕೆ ಎಷ್ಟು ವರ್ಷವಾಗುತ್ತದೆ. ಎರಡು ವರ್ಷಗಳಿಂದ ಕಂಟ್ರಾಕ್ಟರು ಯಾರೂ ಇಲ್ಲ, ದುಡ್ಡೂ ಇಲ್ಲ. ಜಾಕ್‌ವೆಲ್ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಮಳೆಯಿಂದ ಕುಸಿದು ಬಿದ್ದಿದೆಯೆಂದು ತಮಗೆ ಯಾರೊ ತಪ್ಪು ಮಾಹಿತಿ ಕೊಟ್ಟಿದ್ದಾರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಕೆ. ಪ್ರಭಾಕರ್.—ನನಗೆ ಕೊಟ್ಟಿರುವ ಮಾಹಿತಿ ಪ್ರಕಾರ ಮಳೆಯ ಕಾರಣದಿಂದ ಬಿರುಕು ಬಿಟ್ಟಿದೆ ಎಂದು ನಾನು ಹೇಳಿದೆ. ಅದಕ್ಕೆ ಬೇರೆ ಕಾರಣ ಎಂದು ಮಾನ್ಯ ಸದಸ್ಯರು ಹೇಳಿದರು, ಒಟ್ಟಿನಲ್ಲಿ ಬಿರುಕು ಬಿಟ್ಟಿರುವುದು ನಿಜ, ಇದರ ಬಗ್ಗೆ ಸೂಪರಿಂಟೆಂಡಿಂಗ್ ಇಂಜನಿಯರ್ ತನಿಖೆ ಮಾಡುತ್ತಾ ಇದ್ದಾರೆ. ಇದಕ್ಕೆ ಇಂಥವರೇ ಕಾರಣರು ಎಂದು ನಿಗದಿ ಮಾಡಿಲ್ಲ. ಇರುವ ಕೆಲಸ ಪೂರ್ತಿ ಮಾಡುವುದಕ್ಕೆ ಹಣ ಇದೆ. ಬೇಗ ಪೂರ್ತಿ ಮಾಡುವ ವ್ಯವಸ್ಥೆಯನ್ನು ಮಾಡಿಸುತ್ತಿದ್ದೇವೆ, ಕೆಲಸ ನಿಲ್ಲುವುದಿಲ್ಲ.

ಶ್ರೀ ಭಾವುರಾವ್ ದೇಶಪಾಂಡೆ.— ಎರಡು ವರ್ಷದಿಂದ ಧೀರ್ಘ ತನಿಖೆ ನಡೆಯುತ್ತಿದೆಂದು ಹೇಳಿದಿರಿ, ತನಿಖೆ ಕಾರ್ಯ ಮುಗಿಯುವುದಕ್ಕೆ ಇನ್ನು ಎಷ್ಟು ದಿವಸ ಬೇಕಾಗುತ್ತದೆ. ಸ್ವಾಮಿ?

ಶ್ರೀ ಕೆ. ಪ್ರಭಾಕರ್.— ಕುಡಿಯುವ ನೀರಿಗೆ ಇರಿಗೇಷನ್ ಪಂಪ್‌ಸೆಟ್ಟಿನ ಕನೆಕ್ಷನ್ ಕೊಟ್ಟು ನೀರನ್ನು ಒದಗಿಸಿ ಕೊಡುತ್ತಿದ್ದೇವೆ. ಅದನ್ನೇ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಮಾಡಿ ಅದನ್ನು ಮಾಡಿ ಮುಗಿಸಿ ನೀರನ್ನು ನೇರವಾಗಿ ಒದಗಿಸಿ ಕೊಡುವುದಕ್ಕೆ ಆದಷ್ಟು ಬೇಗ ಅದನ್ನು ಮಾಡಿಕೊಡುತ್ತೇವೆ ಹಣವಿಲ್ಲ ಅಂತ ಅಲ್ಲ ಹಣವಿದೆ, ಅಲ್ಲಿಗೆ ಹೊಸ ಕಂಟ್ರಾಕ್ಟರ್‌ರವರನ್ನೂ ಒದಗಿಸಿ ಆ ಕಾರ್ಯವನ್ನು ಪೂರ್ತಿ ಮಾಡಿಕೊಡುತ್ತೇವೆ.

Theft in D.C.C. Hosadurga town Bank (Branch)

515 SRI K. VENKATARAMAIAH (Hosadurga) :— Will the Minister for Co-operation be pleased to state:—

(*a*) whether it is fact that a theft took place during day time fewdays back in the D C.C. Bank Hosadurga Town Branch, Chitradurga District. If so, the amount involved in the theft;

(b) the steps taken by the Government so far to trace out the culprits and the reasons for not recovering the stolen property;

(*c*) whether the Government has appointed special C.I.D. to trace out the culprits ;

(*d*) the number of persons arrested in the said theft case ?

SRI V. M. KUSHNOOR (Minister for Co-operation)

(*a*) Yes. Rs. 30,931.08

(b) The Police Department has appointed the Special Intelligence Staff in order to find out a clue to the theft. The money has not been traced as the culprits are not caught.

(*c*) No.

(*d*) None is arrested.

ಶ್ರೀ ಕೆ. ವೆಂಕಟರಾಮಯ್ಯ.— ಇಷ್ಟು ಹಣ ಕಳವಾಗಿದ್ದರೂ ಕೂಡ ಈ ವಿಷಯದಲ್ಲಿ ಹೆಚ್ಚಿನ ಕ್ರಮ ಸರ್ಕಾರ ತೆಗೆದುಕೊಳ್ಳದಿದ್ದರೆ ಹೇಗೆ? ಬಿಗಿಯಾದ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಸರ್ಕಾರಕ್ಕೆ ಬರಬೇಕಾದ ಹಣ ಎಲ್ಲಿಂದ ಬರುತ್ತದೆ?

† ಶ್ರೀ ವಿ. ಎಂ. ಕುಸನೂರ್.— ಅಲ್ಲಿ ಕಳ್ಳತನವಾದ ಮೇಲೆ ಪೋಲೀಸಿನವರಿಗೆ ಇನ್‌ಫರ್ಮೇಷನ್ ಕೊಡಲಾಗಿದೆ. ಎಫ್.ಎ.ಐ.ಆರ್. ಬುಕ್ ಮಾಡಲಾಗಿದೆ. ಸ್ಪೆಷಲ್ ಸಿ.ಐ.ಡಿ.ಗಳು ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಇನ್‌ವೆಸ್ಟಿಗೇಷನ್ ನಡೆಯುತ್ತಿದೆ. ಮತ್ತೆ ಅಲ್ಲಿ ಒಬ್ಬ ಕ್ಯಾಶಿಯರ ನ್ನು ಸಸ್ಪೆಂಡ್ ಮಾಡಿ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಕೆ. ವೆಂಕಟರಾಮಯ್ಯ.— ಹಾಡು ಹಗಲಿನಲ್ಲೇ ಕಳ್ಳತನವಾಗಿರುವಾಗ ಅದಕ್ಕೆ ಜವಾಬ್ದಾರರಾಗಿರತಕ್ಕವರನ್ನು ಸಸ್‌ಪೆಂಡ್ ಮಾಡಿ ಕ್ರಮ ತೆಗೆದುಕೊಳ್ಳದೇ ಪೋಲೀಸರು ಕಳ್ಳರನ್ನು ಹಿಡಿದುಕೊಟ್ಟರೆ ಒಪ್ಪಿಸಿಕೊಳ್ಳುತ್ತೀರಾ?

ಶ್ರೀ ವಿ. ಎಂ. ಕುಸನೂರ್.— ಇನ್‌ವೆಸ್ಟಿಗೇಷನ್ ನಡೆಯುತ್ತಿದೆ. ಆದಾದನಂತರ ಅವರು ಸರ್ಕಾರಕ್ಕೆ ಮಾಹಿತಿಯನ್ನು ಕೊಡುತ್ತಾರೆ ಅದರಂತೆ ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ತಪ್ಪಿಗೆ ಏನಾದರೂ ಹೆಚ್ಚಿನ ಮಾಹಿತಿ ಇದ್ದರೆ ಕೊಡಿ ಅದನ್ನು ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಕೆ. ವೆಂಕಟರಾಮಯ್ಯ.— ಇಷ್ಟು ಹಣವನು ಒಟ್ಟು ಮಾಡಿರತಕ್ಕವರು ಆ ಸೊಸೈಟಿಯಲ್ಲಿಯೇ ಇಸ್ಪೀಟು ಆಡಿಕೊಂಡು ಕುಳಿದ್ದಾರೆ ಅವರನ್ನು ಹಿಡಿದು ಉಗ್ರ ಶಿಕ್ಷೆ ಮಾಡಿದರೆ ಬೇರೆ ಸೊಸೈಟಿಗಳಲ್ಲಿ ಈ ರೀತಿಯಾಗುವುದು ತಪ್ಪುತ್ತದೆ ಇಲ್ಲದಿದ್ದರೆ ಅದು ಇನ್ನೂ ಎಲ್ಲಾ ಕಡೆಯೂ ಆಗುತ್ತದೆ. ಆ ರೀತಿ ಮಾಡದಿದ್ದರೆ ಸರ್ಕಾರಕ್ಕೆ ಹೇಗೆ ಹಣ ಬರುವುದಕ್ಕೆ ಸಾಧ್ಯವಾಗುತ್ತದೆ ಸ್ವಾಮಿ?

ಶ್ರೀ ವಿ. ಎಂ. ಕುಸನೂರ್.— ನಾನು ಆಗಲೇ ಹೇಳಿದೆ ಪೋಲೀಸಿನವರು ಇನ್‌ವೆಸ್ಟಿಗೇಷನ್ ಮಾಡುತ್ತಿದ್ದಾರೆ. ಅವರು ವರದಿ ಕೊಟ್ಟ ನಂತರ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಸದಸ್ಯರು ಮಾತನಾಡುತ್ತಾ ಹೇಳಿದರು ಆ ಸೊಸೈಟಿಯ ಎಂಪ್ಲಾಯಿ ಒಬ್ಬರು ಇಸ್ಪೀಟು ಆಡಿಕೊಂಡು ಕುಳಿತಿದ್ದಾರೆಂದು ಅವರ ಜೊತೆಗೆ ಯಾರಾದರೂ ಒಬ್ಬರು ಡೆಪ್ಯುಟಿ ರಿಜಿಸ್ಟ್ರಾರ್‌ರನ್ನು ಇಸ್ಪೀಟು ಆಡಲು ಕೂಡಿಸಿ ಬಿಡಿ ಆಗ ಅವರು ಹೊಡೆದ ಹಣ ವಾಪಸ್ಸು ಬಂದು ಬಿಡುವುದಿಲ್ಲವೇ? (ನಗು.....)

ಶ್ರೀ ಕೆ. ಎಚ್. ಸಿದ್ರಾಮಪ್ಪ.— ಸ್ವಾಮಿ, ಇದು ಹೊಸದುರ್ಗದಲ್ಲಿ ಆದ ಕಳ್ಳತನದ ಒಂದು ಶಾಕ್ ನಮ್ಮ ಹೊಳಲ್ಕೆರೆಗೂ ಹತ್ತಿದೆ ಆಗ ನಾನು ಕೂಡಲೇ ಪೋಲೀಸಿನವರಿಗೆ ತಿಳಿಸಿ ಸೂಕ್ತವಾದ ಕ್ರಮ ತೆಗೆದುಕೊಳ್ಳಿ ಎಂದು ಅರ್ಜಿ ಕೊಟ್ಟಿದ್ದೇನೆ. ಆದಂದರಿಂದ ತಾವು ಇಲ್ಲಿಯವರೆಗೆ ಯಾರು ಯಾರನ್ನು ಸಸ್‌ಪೆಂಡ್ ಮಾಡಿದ್ದೀರಿ ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ ಸ್ವಾಮಿ?

ಶ್ರೀ ವಿ ಎಂ. ಕುಸನೂರ್.— ಕ್ಯಾಶಿಯರ್ ಶ್ರೀ ಗುರುಸಿದ್ದಪ್ಪ ಎಂಬುವವರನ್ನು ತಾ: ೧೩-೧೧-೧೯೭೮ ರಂದು ಸಸ್‌ಪೆಂಡ್ ಮಾಡಿದ್ದೇವೆ.

ಶ್ರೀ ಕೆ. ಎಚ್ ಸಿದ್ರಾಮಪ್ಪ.— ನನಗೆ ಮಾಹಿತಿ ಬಂದ ಪ್ರಕಾರ ಇವರಲ್ಲಿ ಇಬ್ಬರು ಶಾಮೀಲು ಆಗಿದ್ದಾರೆ. ಇದರ ಬಗ್ಗೆ ನಾನು ಪೋಲಿಸಿನವರಿಗೆ ಖುದ್ದಾಗಿ ತಿಳಿಸಿದ್ದೇನೆ ಆದರೂ ಇಲ್ಲಿಯವರೆಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ.

ಶ್ರೀ ವಿ. ಎಂ ಕುಸನೂರ್.— ಸ್ವಾಮಿ, ನಾನು ಆಗಲೇ ಹೇಳಿದ ಹಾಗೆ ಕ್ಯಾಶಿಯರ್‌ರವರು ಇದಕ್ಕೆ ಸಂಬಂಧಪಟ್ಟವರು ಆದುದರಿಂದ ಅವರನ್ನು ಸಸ್‌ಪೆಂಡ್ ಮಾಡಿದ್ದೇವೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಅಧ್ಯಕ್ಷರು.— ಪ್ರಶ್ನೆ ನಂ. ೫೨೫ ಸಪ ತಡೆ ಹಿಡಿಯಲಾಗಿದೆ.

Promotion of Forest Range Officers

648 SRI L. T. THIMMAPPA HEGGADE (Sagar).— Will the Minister for Food and Forest be pleased to State :—

(*a*) whether the Forest Surveyors have been appoi ted as Class II Range Forest Officers in Forest department ; If so number of per sons so appointed;